

ಹಬ್ಬಿರುವ ಹಸಿರನ್ನು ಆಸ್ವಾದಿಸುತ್ತಾ, ತಮ್ಮ ಬೆಳಗಿನ ಟೀ ಸ್ವಾದವನ್ನು ಹೀರುವುದು ನಿರ್ಮಲಾ ಅವರ ಸಾಮಾನ್ಯ ದಿನಚರಿ. ಅಂದು ಅವರು ಟೀ ಕಪ್ ಹಿಡಿದು ಅಲ್ಲಿಗೆ ಬರುವುದಕ್ಕೂ, ತೆಂಗಿನ ಮರ ತನ್ನ ಕೊನೆಯ ಉಸಿರು ಚೆಲ್ಲಿ, ರಾಮರಾಯರ ಕಣ್ಣಿನಿಂದ ಎರಡು ಹನಿ ಬೀಳುವುದಕ್ಕೂ ಸರಿಯಾಯಿತು. ಪ್ರತಿ ಸಾರಿ ತೆಂಗಿನಕಾಯಿ ಇಳಿಸಿದಾಗ ಇವರ ಮನೆಗೂ ಒಂದಷ್ಟು ಕೊಡುವುದು, ಕೊಡುವಾಗಲೆಲ್ಲ ಈ ತೆಂಗಿನಮರವನ್ನು ತಮ್ಮ ತಂದೆ ನೆಟ್ಟು ನೀರೆರೆದು ಬೆಳೆಸಿದ ಮರ ಎಂದು ಹೆಮ್ಮೆಯಿಂದ ಹೇಳುವುದು ವಾಡಿಕೆಯಾಗಿತ್ತು. ರಾಮರಾಯರು ಓದು ಮುಗಿಸುವಷ್ಟರಲ್ಲೇ ಅವರ ತಂದೆ ಹೃದಯಾಘಾತದಿಂದ ಸಾವನ್ನಪ್ಪಿದ್ದರು. ಈ ತೆಂಗಿನಮರ ರಾಮರಾಯರ ಹುಟ್ಟುಹಬ್ಬದ ದಿನ ಅವರ ತಂದೆ ನೆಟ್ಟಿದ್ದರು ಮತ್ತು ಅದು ರಾಮರಾಯರಿಗೆ ಅವರ ಕೊನೆಯ ಉಡುಗೊರೆಯಾಗಿತ್ತು. ಎಷ್ಟೇ ಅಸಮಾಧಾನ, ವಾದಗಳು, ತೊಂದರೆಗಳು, ಬೇಡವಾದ ಮಾತುಗಳು ಡಾ.ವಿನ್ನಿಯವರಿಂದ ಆಗಿದ್ದರೂ, ಆ ಬಡಾವಣೆಯಲ್ಲಿ ರಾಮರಾವ್ ಕುಟುಂಬ ಮಾತ್ರ ಈ ಕುಟುಂಬದೊಂದಿಗೆ ಬಾಂಧವ್ಯವನ್ನು ಕಡಿದು ಕೊಂಡಿರಲಿಲ್ಲ. ಆದರೆ, ಈ ಬಾರಿ ನಿರ್ಮಲಾ ಅವರಿಗೆ ಅಲ್ಲಿ ಬಿದ್ದಿದ್ದು ತೆಂಗಿನಮರವಲ್ಲ, ತಮ್ಮ ಜೀವನದ